ಪ್ರಧಾನ ಸಿ.ಜೆ. ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮದ್ದೂರು
ದಿಃ17-10-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ವಿ ಬಿ ವಕೀಲರವರಿಂದಃ

ನಾನು ದಾವೆಯಲ್ಲಿ 3 ಷೆಡ್ಯೂಲ್ ಸ್ವತ್ತನ್ನು ತೋರಿಸಿದ್ದೇನೆ. ಎ -ಷೆಡ್ಯೂಲ್ ಸ್ವತ್ತಿನ ಉದ್ದ ಉತ್ತರ ದಕ್ಷಿಣವಾಗಿ ಸುಮಾರು 350 ಅಡಿ ಇದೆ. ಎ ಷೆಡ್ಯೂಲ್ ಸ್ವತ್ತಿನಲ್ಲಿ ಸದರಿ ಉದ್ದವನ್ನು ನಮೂದಿಸಿಲ್ಲ ಎಂದರೆ ಸರಿ. ಎ ಷೆಡ್ಯೂಲ್ 18 ಅಡಿ ವಿಸ್ತೀರ್ಣವೂ ಪೂರ್ವ ಪಶ್ಚಿಮವಾಗಿದೆ. ಎ-ಷೆಡ್ಯೂಲ್ ಸ್ವತ್ತು 18 ಇಂಟು 350 ಅಡಿ ವಿಸ್ತೀರ್ಣವಿರುವ ಬಗ್ಗೆ ಪಂಚಾಯಿತಿ ದಾಖಲೆಗಳು ಇವೆ. ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಮುಂದೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸದರಿ ದಾಖಲೆಗಳು ಪಂಚಾಯಿತಿಯಲ್ಲಿ ಇರುವುದನ್ನು ನಾನು ನೋಡಿದ್ದೇನೆ. ಸದರಿ ದಾಖಲೆಗಳನ್ನು ದಾವೆಯೊಂದಿಗೆ ಹಾಜರುಪಡಿಸಲು ತೊಂದರೆ ಇರಲಿಲ್ಲ. ಎ-ಷೆಡ್ಯೂಲ್ ಸ್ವತ್ತು 18 ಇಂಟು 350 ಅಡಿ ವಿಸ್ತೀರ್ಣವಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎ ಷೆಡ್ಯೂಲ್ ರಸ್ತೆಯು ನಮ್ಮ ಮನೆಯ ಪೂರ್ವ ದಿಕ್ಕಿಗೆ ಉತ್ತರದಕ್ಷಿಣವಾಗಿದೆ. ಸದರಿ ಎ ಷೆಡ್ಯೂಲ್ ಸ್ವತ್ತು ಊರಿನ ಮುಖ್ಯರಸ್ತೆಗೆ ಸೇರುತ್ತದೆ. ಸದರಿ ಎ ಷೆಡ್ಯೂಲ್ ಸ್ವತ್ತಿನ ಉತ್ತರದ ರಸ್ತೆಯು ಗರೀಬಿ ಕಾಲೋನಿಗೆ ಹೋಗಿ ಗೌಡಗೆರೆ ಕಡೆಗೆ ಹೋಗುತ್ತದೆ ಎಂದರೆ ಸರಿ. ಎ ಷೆಡ್ಯೂಲ್ ಸ್ವತ್ತಿನ ದಕ್ಷಿಣದಲ್ಲಿರುವ ರಸ್ತೆ ಊರಿನ ಒಳಗಡೆಯ ಸಂಪರ್ಕ ರಸ್ತೆಯಾಗಿದೆ. ಸದರಿ ರಸ್ತೆಯು ಪಶ್ಚಿಮಕ್ಕೆ ಗರೀಬಿ ಕಾಲೋನಿಗೆ ಹೋಗಿ ಮುಂದೆ ಗೌಡಗೆರೆ ಗ್ರಾಮಕ್ಕೆ ಹೋಗುತ್ತದೆ ಎಂದರೆ ಸರಿ. ಎ ಷೆಡ್ಯೂಲ್ ಸ್ವತ್ತಿನ 350 ಅಡಿ ಉದ್ದದ ಪೂರ್ವಕ್ಕೆ 4-5 ಮನೆ ಮತ್ತು 3-4 ಖಾಲಿನಿವೇಶನಗಳು ಇವೆ. ಸದರಿ ರಸ್ತೆಯ ಪಶ್ಚಿಮಕ್ಕೆ 3 ಖಾಲಿ ನಿವೇಶನ, 3-4 ಮನೆಗಳು ಇವೆ. ಸದರಿ ಪೂರ್ವಕ್ಕೆ ವಾದಿಯ ತಂದೆ, ವಾದಿಯ ತಮ್ಮ, ವಾದಿಯ ನಾದಿನಿ, ಚಂದ್ರು ಮತ್ತು ಸುನಂದಮ್ಮ ಇತರರ ಮನೆಗಳು ಇವೆ. ಖಾಲಿ ನಿವೇಶನ ಯಾರದು ಇದೆ ಮುಂದಿನ ಸಲ ಹೇಳುತ್ತೇನೆಂದು ಉತ್ತರಿಸಿರುತ್ತಾರೆ. ಪಶ್ಚಿಮದಲ್ಲಿ ನನ್ನ ಮನೆ, ಕಾಡೇಗೌಡ, ಆನಂದ, ಮಲ್ಲೇಗೌಡರವರ ಮನೆಗಳು ಇವೆ ಹಾಗೂ ಮಲ್ಲೇಗೌಡ, ನನ್ನ ಮತ್ತು ವೀಣಾ ಎಂಬುವವರ ನಿವೇಶನಗಳು ಇವೆ. ಸದರಿ ಮನೆಗಳಲ್ಲಿ ಕೆಲವನ್ನು 40-50 ವರ್ಷಗಳ ಹಿಂದೆ ನಿರ್ಮಿಸಿದ್ದು ಇನ್ನು ಕೆಲವು 4-5 ವರ್ಷದ ಹಿಂದೆ ನಿರ್ಮಿಸಲಾಗಿದೆ. ಸದರಿ ಪೂರ್ವ ಪಶ್ಚಿಮದಲ್ಲಿ ಮನೆ ನಿರ್ಮಿಸುವಾಗ, ಮಧ್ಯದಲ್ಲಿ ಅವರ ಜಾಗಗಳಲ್ಲಿ ತಿರುಗಾಡಲು ಜಾಗ ಬಿಟ್ಟಿದ್ದಾರೆ ಎಂದರೆ ಸಾಕ್ಷಿಯು ಕೆಲವರು ಬಿಟ್ಟಿದ್ದಾರೆ ಎನ್ನುತ್ತಾರೆ. ಸದರಿ ಜಾಗ ಬಿಟ್ಟವರೆಂದರೆ ನಾನು, ಮಲ್ಲೇಗೌಡ, ಆನಂದ, ಕಾಡೇಗೌಡ. ಸದರಿ ಜಾಗ ಬಿಡದವರೆಂದರೆ, ವಾದಿ, ವಾದಿಯ ತಂದೆ ಅವರ

ಕುಟುಂಬದವರಾಗಿರುತ್ತಾರೆ. ನಾನು ಮತ್ತು ಜಾಗ ಬಿಟ್ಟ ಇತರರು ತಲಾ 13 ಅಡಿ ಬಿಟ್ಟಿರುತ್ತೇವೆ. ನಾವುಗಳು 13 ಅಡಿಗಳನ್ನು ರಸ್ತೆಗಾಗಿ ಬಿಟ್ಟಿದ್ದೇವೆಂದು ತೋರಿಸಲು ದಾಖಲಾತಿ ಇದೆ. ರಸ್ತೆಯ ಪಶ್ಚಿಮದವರು ಮಾತ್ರ ಜಾಗ ಬಿಟ್ಟಿದ್ದು ಪೂರ್ವದವರು ಬಿಟ್ಟಿಲ್ಲ ಎಂದು ಹೇಳುತ್ತೀರಾ ಎಂದು ಪ್ರಶ್ನಿಸಿದರೆ ಸಾಕ್ಷಿಯು ಪೂರ್ವದಲ್ಲೂ ಕೆಲವರು ಬಿಟ್ಟಿದ್ದು, ಆದರೆ ವಾದಿಯ ಕುಟುಂಬದವರು ಬಿಟ್ಟಿಲ್ಲ ಎನ್ನುತ್ತಾರೆ. ಪೂರ್ವ ದಿಕ್ಕಿನಲ್ಲಿರುವವರು 5 ಅಡಿ ಬಿಟ್ಟಿರುತ್ತಾರೆ. ಅವರುಗಳೆಂದರೆ ಕರಿಚನ್ನೇಗೌಡನ ಮಕ್ಕಳು, ಚಿಕ್ಕಯ್ಯನ ಮಕ್ಕಳು.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು